1884ನೇ ಇಸವಿ ಆರ್ಜೀ ನಂಬರ್ 591.

ಮೃತಪಟ್ಟ ಮೂಡ್ಲುಗಿರಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟ ಮೈನರ್ ಗಾರ್ಡಿಯರ್ ತಾಯಿ ಗಿರಿಯಮ್ಮ ಮೃತಪಟ್ಟ ಸದರೀ ಮೂಡ್ಲುಗಿರಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕೃಷ್ಣರಾಜಮೊಹಲ್ಲಾ ಸ್ಥಳದ ವೆಂಕಟ ಮೈನರ್ ಗಾರ್ಡಿಯರ್ ತಾಯಿ ಗಿರಿಯಮ್ಮ ಸದರೀ ವಾಸಸ್ಥನಾಗಿ ಮೃತಪಟ್ಟ ಮೂಡ್ಲುಗಿರಯ್ಯನ ಜೆಂದಗಿ ಜಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ವೆಂಕಟ ಮೈನರ್ ಗಾರ್ಡಿಯರ್ ಗಿರಿಯಮ್ಮನ ಅರ್ಜೀಯನ್ನು 1885ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೂಡ್ಲುಗಿರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಆರ್ಜೀ ನಂಬರ್ 605.

ಮೃತಪಟ್ಟ ದಾಸೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ದಾಸೇಗೌಡ, ಮೃತಪಟ್ಟ ಸದರೀ ದಾಸೇಗೌಡನಿಗೆ ಮಗ ಆಗಬೇಕೆಂಬಿ ಹಕ್ಕುದಾರೀ ಮೇಲೆ ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ಮುದ್ದಗೆರೆ ಸ್ಥಳದ ದಾಸೇಗೌಡನು, ಸದರೀ ವಾಸಸ್ಥನಾಗಿ ಮೃತಪಟ್ಟ ದಾಸೇಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ನ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ದಾಸೇಗವ್ಡನ ಅರ್ಜೀಯನ್ನು 1885ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸ್ವರೂ ಈ ಕೋರ್ಟಿನಲ್ಲಿ ಹಾಜರ್ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜನವರೀ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿ ನಮ್ಮ ಹಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಯ್ಯ. ನರಸಿಹ್ಮಯ್ಯಂಗಾರ್,
ಸೆರ್ವ ಜಡ್ಜ್

ಶಿವಮೊಗ್ಗ ಡಿಸ್ಟ್ರಿಕ್ಟು.

ಇನ್ಸಿಹಾರ್ ನಾಮೆ

ತಾರೀಖು 1ನೇ ಜನವರೀ 1885.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲಿನಲ್ಲಿ ಬೈದು ಮಾಡಲ್ಪಟ್ಟಿರುವ ಬೈದಿಗಳ ಉಪಯೋಗದ ಬಗ್ಯೆ ಸ್ಕ 1885ನೇ ಇಸವಿ ಏಪ್ರೆಲ್ ಗುತ್ಸೇ ತಾರೀಖು ಮೊದಲು 1886ನೇ ಮಾರ್ಚೀ 31ನೇ ತಾರೀಖಿನವರೆಗೆ ಎಷ್ಟು ದಿನಗಳೂ ಸೇರಿ ೧೯೦೦ ಆಹಾರ ವಗೈರೇ ದೊಬ್ರುಸ್ತು ಜಿನಸುಗಳನ್ನೂ ಕೆಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಿಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ಂಟೆಂಡೆಂಟರವರು, ಜೈಲುಗಳ ಇನ್ಸ್ಪೆಕ್ಟರ್ ಜನರಲ್ಲವರಿಂದ ಕಾಯಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಕ 1885ನೇ ಇಸವಿ ಮಾರ್ಚೀ 1ನೇ ತಾರೀಖು ಪಗೆ ನಡಿಸಿಕೊಳ್ಳಿವಾ.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಶಿವಮೊಗ್ಗಾ ಜೈಲಿಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದಾವ ಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರ್ನಾಟಕ ನೋಟುಗಳ ಮೂಲಕ ಡಿಪಾಜಿಟ್ಟಿನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟಪ್ರಕಾರ ದರಖಾಸ್ತುದಾರರ ರೂಬರೂ, ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

				ರೂ. ಆ. ಪೈ.
ನೇಟಿವ್ ಕೂಲಿಯವರಾದ ಗಂಡುಸರಿಗೆ		A ಕ್ಲಾಸ್	.. ..	
ಡಿಟೋ	ಡಿಟೋ	B „	.. ..	
ಡಿಟೋ	ಡಿಟೋ	C „	.. ..	
ಹುಡುಗರಾದ ಖೈದೀರು			.. ..	
ನೇಟಿವ್ ಕೂಲೀ ಮಾಡದ ಗಂಡುಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು,		D ಕ್ಲಾಸ್		
ಯೂರೋಪಿಯರ್ಸ್‌ಗಳು ವ ಈಸ್ಟ್ ಇಂಡಿಯರ್ಸ್‌ಗಳು			.. ..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಪದಾರ್ಥಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಆಸ್ಪತ್ರೆ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಎಣ್ಣೆ, ಲಾಂಡ್ರಿಗಳು, ಮತ್ತು ಆಸ್ಪತ್ರೆಗಳ ರಜೇರಿ ಪೂಡಿಸುವಣ, ಸ್ನಾನ ಮಾಡಲಿಕ್ಕೆ ನೀಗೇಕಾಯಿ, ತಪಸೂಂ ತಾಂಬ್ರ ಪಾತ್ರೆಗಳ ರಜೇರಿ ವ ಕಲಾಯಿ, ಪರಕೆಗಳು, ಗೂಡಿ ಚಾಪ ಮಾಡಲಿಕ್ಕೆ ಬಿದುರು, ಮಡಿಕೆ ಸುಡುವದಕ್ಕೆ ಸಾದ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ ಸಕ್ಕರೆ ವಗೈರೇ ಪದಾರ್ಥಗಳು, ಜೋಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಎಟ್ಟೆ ಕಾಯಿ ಖೈದಿಗಳ ಉಪಯೋಗದ ಬಗ್ಗೆ ಕ್ರಮವಾಗಿ ಕೊಡಬೇಕಾದ ತಮೂಂ ಚಿಲ್ಲರೇ ಪದಾರ್ಥಗಳೂ ಸಪ ಅವಶ್ಯಕತಕ್ಕದ್ದು.

8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಪುಳಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ್ ಪೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ಸಗದಾವರೂ ಗವರ್ನಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಪೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಪೊದಲು ಒಂದು ವಾರದ ಪಳಗಾಗಿ, ಕೊಡಲಿಕ್ಕಾಗಲಿ ತಪ್ಪಿದರೆ, ಸರಕಾರಕ್ಕೆ ಕೇದು ಹೊಳ್ಳಲ್ಪಡುವದು.

10. ಕಂಟ್ರಾಕ್ಟುದಾರಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರಿಂದ ಪೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಸಾವಾಸುಗಳ ಬಗ್ಗೆ ಬಂದು ಪೋಲಿಯು ಬಿಡಲ್ಪಡುವದು, ಅದರಲ್ಲಿ ಅತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಪೆಳಿಗ್ಗೆ 7½ ಘಂಟೆಗೆ ಜೈಲ್ ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ಪಳ ಷಿಕ್ಕಿಗೆ ಕೊಡಲ್ಪಡತಕ್ಕದಲ್ಲ.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ, ತೊಗರೀ ಳೆ ಯಿವುಗಳು ಮಾಡಲ್ಪಟ್ಟು ಕಲ್ಲು ಮಣ್ಣು ಯಿಲ್ಲದೆಯು ಇರತಕ್ಕದ್ದು; ಮೆಣಸಿನಕಾಯಿಯ ತವೂಂ ತುಂಬುಗಳನ್ನು, ಹುಣಸೆ ಹಣ್ಣಿನ ನಾರು ಮತ್ತು ಬೀಜಗಳನ್ನು ಜೈಲಿಗೆ ಸರಬರಾಯಿ ಮಾಡುವದಕ್ಕೆ ಪೂರ್ವವೇ ತೆಗದು ಹಾಕತಕ್ಕದ್ದು.

14. ಕಂಟ್ರಾಕ್ಟಿನ ಸಿಬಂಧನೆಗೆ ತಪ್ಪಿ ನಡೆಯುವ ಬಗ್ಗಾಗಲಿ, ಕಿರದು ತರವ ಯಾವ ಪದಾರ್ಥಗಳನ್ನು ಕೊಡುವ ಬಗ್ಗಾಗಲಿ, ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರ ಯಿಷ್ಟಾನೀಯಿಂದ 50 ರೂಪಾಯಿಗೆ ಮಿಗದ ಒಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರಿ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಡಾವಿಸ್ ಪೊಬಲಗು ಸರಕಾರಕ್ಕೆ ಕಿರಿಸಿಕೊಳ್ಳಲ್ಪಡುವದು.

15. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರ ನಿರ್ಣಯವೇ ಅಬೈರುಗಿರತಕ್ಕದ್ದು.

16. ಕಂಟ್ರಾಕ್ಟ್ದಾರನು ಖೈದಿಗಳ ಉಪಯೋಗಾರ್ಥ ತರಕಾವೀಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ಟಿಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡಪು ಜೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟ್ದಾರನೇ ಕಟ್ಟಿಕೊಡತಕ್ಕದ್ದು.

19. ಹಾಲೀ ಶಿವಮೊಗ್ಗಾ ಜೈಲಿನಲ್ಲಿ 225 ಮಂದಿ ಖೈದೀದ್ದಾರೆ, ಈ ಸಾಲಿನಲ್ಲಿ ಷುಮಾರ್ 250 ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜು ಯಿರುತ್ತೆ.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುಕ್ತಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರ್ಟಿಂಡೆಂಟರವರನ್ನು ಕೇಳಿ ಆಗಲಿ ತಿಳದುಕೊಳ್ಳಬಹುದು.

ಬಿ. ವಂಚಿನಾಥರಾವ್,
ಜೈಲ್ ಸೂಪರ್ಟಿಂಡೆಂಟ್.

ನಗರ ಡಿವೀಜ್ಞ.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟ್ನಲ್ಲಿ.

1884ನೇ ಇಸವಿ ಅರ್ಜಿ ನಂಬರ 135.

ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಆಸ್ತಿ ವಿಷಯದಲ್ಲಿ—

ಅರ್ಜಿದಾರ ಬೀರೂರು ಬಸಪ್ಪನ ಮಗ ಮಲ್ಲಪ್ಪ, ಮೃತಪಟ್ಟ ಸದರೀ ಮಲ್ಲಿಕಾರ್ಜ್ಜುನಪ್ಪನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕು ಬೀರೂರು ಸ್ಥಳದ ಮಲ್ಲಪ್ಪನು, ಸದರೀ ಬೀರೂರು ವಾಸಸ್ಥನಾಗಿ ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪನ ಅರ್ಜಿಯನ್ನು 1885ನೇ ಇಸವಿ ಫಿಬ್ರುವರಿ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಟ್ಯರೂ ಈ ಕೋರ್ಟ್ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1885ನೇ ಇಸವಿ ಜನವರಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 137.

ಮೃತಪಟ್ಟ ವೆಸವಾ ಮಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತಿಪ್ಪಾರಿ ತಿಮ್ಮಯ್ಯ, ಮೃತಪಟ್ಟ ಸದರೀ ವಸವಾ ಮಂಜಪ್ಪನು ಬರದು ಯಿಟ್ಟ ಮರಣಶಾಸನದ ಮೇರಿಗೆ ಆತನ ಆಸ್ತಿಗೆ ಬಾಧ್ಯನೆಂಬ ಹಕ್ಕುದಾರಿ ಮೇಲೆ ನಗರ ತಾಲ್ಲೂಕು ಆರ್ನಾಡು ಮಾಗಣಿ ಕಿರಗುಳಕೆ ಸ್ಥಳದ ತಿಪ್ಪಾರಿ ತಿಮ್ಮಯ್ಯನು, ನಗರ ತಾಲ್ಲೂಕು ಆರ್ನಾಡು ಮಾಗಣಿ ಬಿಳದೊಣೆ ವಾಸಸ್ಥನಾಗಿ ಮೃತಪಟ್ಟ ವಸವಾ ಮಂಜಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ತಿಪ್ಪಾರಿ ತಿಮ್ಮಯ್ಯನ ಅರ್ಜೀಯನ್ನು 1885ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಸವಾ ಮಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಷಿಷ್ಟರೂ ಈ ಕೋರ್ಟ್ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.